ಆ) ಹೀಗೆ ಮಾಡುವುದರಿಂದ ಹಣದ ದುರುಪಯೋಗ ಕಡಿಮೆ ಮಾಡಬಹುದೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಸರ್ಕಾರದ ಯೋಜನೆಗಳಿಗೆ ಹಣ ಬಿಡುಗಡೆಯನ್ನು ವಿವಿಧ ಪ್ರಾಧಿಕಾರಿಗಳು ಉದಾಹರಣೆಗೆ ಆರ್ಥಿಕ ಇಲಾಖೆ, ಆಡಳಿತ ಇಲಾಖೆಗಳು, ಇಲಾಖಾ ಮುಖ್ಯಸ್ಥರುಗಳು ಹಾಗೂ ಇತರೆ ನಿಯಂತ್ರಣ ಅಧಿಕಾರಿಗಳು ಮಾಡುತ್ತಾರೆ. ಖಾತೆಯನ್ನು ಹೊಂದಿರುವ ಅಧಿಕಾರಿಗಳು ಹಣದ ಬಿಡುಗಡೆಯನ್ನು ಡ್ರಾಪ್ಟ್ ಮುಖಾಂತರವು ಕೆಲವು ಸಂದರ್ಭಗಳಲ್ಲಿ ಮಾಡುತ್ತಾರೆ. ಈ ಚೆಕ್ಕುಗಳು ಯೋಜನೆಗಳನ್ನು ಜಾರಿಗೊಳಿಸುವ ಅಧಿಕಾರಿಗಳಿಗೆ ನೇರವಾಗಿ ಹೋಗುತ್ತದೆ. ಕೆಲವು ಯೋಜನೆಗಳಲ್ಲಿ ಭಾರತ ಸರ್ಕಾರವು ಯೋಜನೆಗಳನ್ನು ಜಾರಿಗೊಳಿಸಲು ಅಧಿಕಾರಿಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡುತ್ತದೆ. ಜಿಲ್ಲಾ ಪರಿಷತ್ತಿನ ರಾಜ್ಯ ಯೋಜನಾ ಕಾರ್ಯಕ್ರಮಗಳಿಗೆ ಹಾಗೂ ಯೋಜನೇತರ ಕಾರ್ಯಕ್ರಮಗಳಿಗೆ ಆರ್ಥಿಕ ಇಲಾಖೆಯೇ ಹಣ ಬಿಡುಗಡೆ ಮಾಡಿ ಸಂಬಂಧಿತ ಜಿಲ್ಲಾ ಪರಿಷತ್ತುಗಳಿಗೆ ಹಣ ಬಿಡುಗಡೆ ಮಾಹಿತಿಯನ್ನು ವಿಕ್ ನೆಟ್ ಮುಖಾಂತರ ಮಾರನೆಯ ದಿನವೇ ಕಳುಹಿಸಲಾಗುವುದು. ಆದ್ದರಿಂದ ಹಣ ಬಿಡುಗಡೆಯ ಪ್ರತಿಯೊಂದು ಮಾಹಿತಿಯನ್ನು ಸ್ಥಳೀಯ ಶಾಸಕರಿಗೆ ಹಾಗೂ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ತಿಳಿಸುವುದು ಆಡಳಿತ ಯಂತ್ರಕ್ಕೆ ಬಹಳ ಕಷ್ಟವಾಗುವುದು.

ಆ) ಮಾಹಿತಿ ನೀಡುವಿಕೆಯಲ್ಲಿನ ಅಂತರದಿಂದ ಉಂಟಾಗಬಹುದಾದ ಭ್ರಷ್ಟಾಚಾರವನ್ನು ನಿವಾರಿಸಲು ಸರ್ಕಾರದ ಆರ್ಥಿಕ ನೇತೃತ್ವ ರಚನೆಯನ್ನು ಪುನರ್ ರೂಪಿಸಲಾಗುತ್ತಿದೆ.

ಸಣ್ಣ ನೀರಾವರಿ ಇಲಾಖೆಗೆ ನಿಗದಿಯಾದ ಹಣ ಕುರಿತು

299 (606) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1997-98ನೇ ಸಾಲಿನಲ್ಲಿ ನೀರಾವರಿ ಇಲಾಖೆಗೆ ನಿಗದಿಯಾದ ಮೊತ್ತವೆಷ್ಟು;

ಆ) ಈ ಮೊತ್ತದಲ್ಲಿ ಮುಂದುವರಿದ ಕಾಮಗಾರಿಗಳಿಗೆ ಖರ್ಚಾದ ಮೊತ್ತವೆಷ್ಟು; ಪ್ರಸ್ತುತ ಸಾಲಿನಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಒಟ್ಟು 7925.77 ಲಕ್ಷ ರೂ.ಗಳು ನಿಗದಿಪಡಿಸಲಾಗಿದೆ.

ಆ) ಮುಂದುವರೆದ ಕಾಮಗಾರಿಗಳಿಗೆ ಖರ್ಚಾದ ಮೊತ್ತ 4260.059 ಲಕ್ಷ ರೂ.ಗಳು ಹೊಸ ಕಾಮಗಾರಿಗಳಿಗೆ ಖರ್ಚಾದ ಮೊತ್ತ 108.537 ಲಕ್ಷ ರೂ.ಗಳು ಕೈಗೆತ್ತಿಕೊಳ್ಳಲಾಗಿರುವ ಒಟ್ಟು ಕಾಮಗಾರಿಗಳು 1088.